ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಇದಕ್ಕೆ ಸಂಪನ್ಮೂಲ ಸಂಗ್ರಹ ಮಾಡಲು ಮಾಹಿತಿ ಬಾಂಡ್ ಪ್ರಕಟಣೆ ಮಾಡಿ ಸುಮಾರು 300 ಕೋಟಿಗಳ ಗುರಿಯನ್ನು ನಿಗದಿ ಮಾಡಲಾಗಿದೆ, ಕೇವಲ 60 ಕೋಟಿ ರೂಪಾಯಿ ಮಾತ್ರ ಸಂಗ್ರಹವಾಗಿದೆ, ಆ ಗುರಿಯನ್ನು ಯಾವಾಗ ಪೂರ್ಣಗೊಳಿಸುತ್ತೀರಿ.

ಶ್ರೀ ಎಂ.ಎಂ.ನಾಣಯ್ಯ: ಸರ್ಕಾರ ಈಗಾಗಲೇ 60 ಕೋಟಿ ರೂಪಾಯಿಗಳನ್ನು ವಿವಿಧ ಇಲಾಖೆಗಳಿಗೆ ಹಂಚಿ ಈ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಗೆ ಖರ್ಚು ಮಾಡುತ್ತಿದೆ, ಮತ್ತೆ ಎರಡನೆ ಹಂತಕ್ಕೆ ಸಧ್ಯದಲ್ಲೇ ಸರ್ಕಾರ ನೋಟಿಫಿಕೇಷನ್ ಹೊರಡಿಸಲಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಕುಡಿಯುವ ನೀರಿನ ಸೌಲಭ್ಯ.

269(2797)

ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್(ಹುಬ್ಬಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಹೋಗಲಾಡಿಸಲು ಕಾಳನದಿಯಿಂದ ನೀರು ಸರಬರಾಜು ಮಾಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

2. ಹಾಗಿದ್ದಲ್ಲಿ ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚ ಎಷ್ಟು?

3. ಈ ಕಾಮಗಾರಿ ಯಾವ ವರ್ಷದಿಂದ ಕೈಗೆತ್ತಿಕೊಳ್ಳಲಾಗುವುದು?

4. ಹಾಗಿಲ್ಲದಿದ್ದಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳದಿರಲು ಕಾರಣವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು):

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಉದ್ಭವಿಸುವುದಿಲ್ಲ.

4. ಧಾರವಾಡ-ಹುಬ್ಬಳ್ಳಿಗೆ ಮಲಪ್ರಭಾ ನದಿಯ ಮೂಲದಿಂದ 3ನೇ ಹಂತದ ಸಮಗ್ರ ಯೋಜನೆಯನ್ನು ತಯಾರಿಸಿ ರೂ. 144.034 ಕೋಟಿ ಅಂದಾಜನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. ಆದ್ದರಿಂದ ಕಾಳಿನದಿ ಯೋಜನೆಗೆ ಪ್ರಸ್ತಾವನೆಯಿರುವುದಿಲ್ಲ.

11.50 ಪಿ.ಎಂ

ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್: ನಾವು ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಪ್ರತಿ ಐದು ದಿವಸಗಳಿಗೊಮ್ಮೆ ನೀರು ಸರಬರಾಜು ಆಗುತ್ತಿದೆ. ಕಳೆದ ಮೂರು ಅಧಿವೇಶನಗಳಲ್ಲಿಯೂ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಇದನ್ನು ಯಾವಾಗ ಅನುಷ್ಠಾನಕ್ಕೆ ತರುತ್ತೀರಿ? ಮಲಪ್ರಭಾ ನದಿಯಲ್ಲಿ ನೀರಿನ ಸಂಗ್ರಹಣೆ ಮಾಡಲು ಸಾಧ್ಯವಿಲ್ಲ. ಮಲಪ್ರಭಾ ಮತ್ತು ಕಾಳಿ ನದಿ, ಹುಬ್ಬಳ್ಳಿ-ಧಾರವಾಡಕ್ಕೆ ಸೇಮ್ ಡಿಸ್ಟೆನ್ಸ್ ಇದೆ. ಕಾಳಿ ನದಿಯಿಂದ 3ನೇ ಯೋಜನೆಯನ್ನು ತೆಗೆದುಕೊಳ್ಳಲು ಏತಕ್ಕೆ ವಿಳಂಬ ಮಾಡುತ್ತಿದ್ದಾರೆಂಬುದನ್ನು ಹೇಳಬೇಕು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಪಟ್ಟಣಕ್ಕೆ ಕುಡಿಯುವ ನೀರಿನ ಅವಶ್ಯಕತೆಗನುಗುಣವಾಗಿ ನೀರ್‌ಸಾಗರ ಸೋರ್ಸ್‌ನಿಂದ 36.32 ಎಂಎಲ್‌ಡಿ ನೀರನ್ನು ತೆಗೆದುಕೊಳ್ಳುತ್ತೇವೆ. ಅದೇ ರೀತಿ, ಮಲಪ್ರಭಾ ಡ್ಯಾಂನಿಂದ ಸುಮಾರು 47.67 ಎಂಎಲ್‌ಡಿ ನೀರು ಸಿಗುತ್ತದೆ. ಒಟ್ಟು 83.99 ಎಂಎಲ್‌ಡಿ ನೀರನ್ನು ಮಲಪ್ರಭಾ ಮತ್ತು ನೀರ್‌ಸಾಗರ ಯೋಜನೆಗಳ ಮೂಲಕ ಹುಬ್ಬಳ್ಳಿ-ಧಾರವಾಡಕ್ಕೆ ಕುಡಿಯುವ ನೀರಿನ ವ್ಯವಸ್ಥೆಗೆ ಕೊಡುತ್ತಿದ್ದೇವೆ. ಜನಸಂಖ್ಯೆಗನುಗುಣವಾಗಿ ಲೆಕ್ಕಹಾಕಿದರೆ ನಮಗೆ ಒಟ್ಟು 105 ಎಂಎಲ್‌ಡಿ ನೀರು ಬೇಕಾಗುತ್ತದೆ. ಈಗ ನಾವು 84 ಎಂಎಲ್‌ಡಿ ನೀರು ಕೊಡುತ್ತಿದ್ದೇವೆ. ಸುಮಾರು 11 ಎಂಎಲ್‌ಡಿ ನೀರು ಶಾರ್ಟೇಜಾಗಿದ್ದು, ಅದನ್ನು ಕವರ್ ಮಾಡುವುದಕ್ಕೆ, ಕುಡಿಯುವ ನೀರನ್ನು ಹೆಚ್ಚು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ 44 ಕೋಟಿ 48 ಲಕ್ಷ ರೂಪಾಯಿಗಳಿಗೆ ದಿನಾಂಕ 22.08.2000ದಂದು ಮಂಜೂರಾತಿ ನೀಡಿದ್ದೇವೆ. ಇದರಿಂದ ನಮಗೆ 13 ಎಂಎಲ್‌ಡಿ ನೀರು ಸಿಕ್ಕಿದಂತಾಗುತ್ತದೆ. ಈಗಾಗಲೇ ಎಲ್ ಅಂಡ್ ಟಿ ಕಂಪನಿಯವರು ಕೆಲಸ ಪ್ರಾರಂಭ ಮಾಡಿದ್ದಾರೆ. ಅವರೂ ಸಹ ಈಗಾಗಲೇ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ಯೋಜನೆ ಬಹಳ ತೀವ್ರಗತಿಯಿಂದ ನಡೆದಿದೆ. ಇದರ ಜೊತೆಗೆ, 144 ಕೋಟಿ ರೂಪಾಯಿಗಳ ಒಂದು ಯೋಜನೆಯ ಪ್ರಸ್ತಾಪ ಸರ್ಕಾರದ ಮುಂದಿದೆ. ಅದರ ಮಂಜೂರಾತಿಗಾಗಿ ಈಗೇನು ಒತ್ತಾಯಿಸುತ್ತಿದ್ದಾರೆ, ಅದನ್ನು ನಮ್ಮ ವರ್ಲ್ಡ್ ಬ್ಯಾಂಕ್‌ನವರು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ವರ್ಲ್ಡ್ ಬ್ಯಾಂಕ್ ಜೊತೆ ನಾವೂ ಕೂಡ ಪ್ರಯತ್ನಿಸುತ್ತಿದ್ದೇವೆ. ಅವರ ಸಹಯೋಗದಿಂದ ಅದಷ್ಟು ಜಾಗ್ರತೆ ಈ

ಕಾಮಗಾರಿಯನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಶ್ರೀ ಚಿಮ್ಮನಕಟ್ಟಿಯವರು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ನಾನು ಸಹಮತ ವ್ಯಕ್ತಪಡಿಸುತ್ತಿದ್ದೇನೆ. ಆದರೆ, ಹುಬ್ಬಳ್ಳಿ-ಧಾರವಾಡದ ಜನಸಂಖ್ಯೆ 10 ಲಕ್ಷಕ್ಕೂ ಮೀರಿದೆ. ಅಲ್ಲಿಗೆ 20 ಮಿಲಿಯನ್ ಗ್ಯಾಲನ್ ನೀರು ಬೇಕು. ಈತನಕ ಎಲ್ಲಾ ಸೇರಿಸಿದರೆ, 15 ಮಿಲಿಯನ್ ಗ್ಯಾಲನ್ ನೀರು ಮಾತ್ರ ಸಿಗುತ್ತಿದೆ. ಹೀಗಾಗಿ, 5 ಮಿಲಿಯನ್ ಗ್ಯಾಲನ್ ನೀರಿನ ಕೊರತೆ ಇದೆ. ಮಲಪ್ರಭಾ ಮೂರನೇ ಹಂತದ 144 ಕೋಟಿ ರೂಪಾಯಿಗಳ ಯೋಜನೆ ಬಗ್ಗೆ ಏನು ಹೇಳಿದ್ದೀರಿ, ನಾನು 1994 ರಿಂದ 1999ರವರೆಗೂ ಶಾಸಕನಾಗಿದ್ದಾಗಿನಿಂದಲೂ ಹಿಂದಿನ ಸರ್ಕಾರಗಳಿರಬಹುದು, ಈಗಿನ ಸರ್ಕಾರವಿರಬಹುದು, ಪ್ರತಿವರ್ಷ ಈ ಯೋಜನೆ ವರ್ಲ್ಡ್ ಬ್ಯಾಂಕ್‌ನಲ್ಲಿ ಪ್ರಪೋಸಲ್ ಇದೆ ಎಂದೇ ಹೇಳುತ್ತಾ ಬಂದಿದ್ದಾರೆ. ಅದು ಇಲ್ಲಿಯವರೆಗೂ ಇಂಪ್ಲಿಮೆಂಟ್ ಆಗಿಲ್ಲ. ಮಲಪ್ರಭಾ ನದಿಯಲ್ಲಿ ಪೂರ್ತಿ ನೀರು ಕಡಿಮೆಯಾಗುತ್ತಿದೆ. ಕಳೆದ ವರ್ಷ ಎಷ್ಟಿತ್ತೋ ಅದಕ್ಕಿಂತ 20-30 ಪರ್ಸೆಂಟ್ ನೀರು ಕಡಿಮೆಯಾಗಿದೆ. ಮಲಪ್ರಭಾ ನದಿಯಲ್ಲಿ ನೀರಿಲ್ಲ. ಮಲಪ್ರಭಾ ನದಿಯಿಂದ ಸವದತ್ತಿ ಇರಬಹುದು, ಬೇರೆ ಬೇರೆ ಭಾಗಗಳಿಗೆ ಕುಡಿಯುವ ನೀರಿನ ಸಲುವಾಗಿ ನೀರು ತೆಗೆದುಕೊಳ್ಳುವುದಿರಬಹುದು ಮತ್ತು ನಗರ, ಪಟ್ಟಣಗಳಿಗೆ ಅದರಿಂದ ನೀರು ಹೋಗುತ್ತಿದೆ. ಇರಿಗೇಷನ್‌ಗೆ ನೀರು ಸಿಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕಾಳಿ ನದಿಯಿಂದ ಹಳಿಯಾಳ ಮಠಕ್ಕೆ ನೀರು ಬರುತ್ತಿದೆ. ಅದರಿಂದ ಧಾರವಾಡಕ್ಕೆ ಬಹಳ ದೂರವಿದೆ. ದಾಂಡೇಲಿಗೂ ನೀರು ಬಂದಿದೆ. ಧಾರವಾಡ-ಹುಬ್ಬಳ್ಳಿಗೆ ಕಾಳಿ ನದಿಯಿಂದ ನಿರಂತರವಾಗಿ ನೀರಿರುತ್ತದೆ. ಕಾಳಿ ನದಿಗೆ ನೀವು ಪ್ರಪೋಸಲ್ ತೆಗೆದುಕೊಳ್ಳಿ. ಇದರ ಬಗ್ಗೆ ನಾವು ಕಳೆದ ಅಧಿವೇಶನದಲ್ಲಿಯೂ ಕೇಳಿದ್ದೆವು. ಕಾಳಿ ನದಿ ಎಷ್ಟು ಫೀಸಿಬಿಲಿಟಿ ಇದೆ ಎನ್ನುವ ಬಗ್ಗೆ ಎಕ್ಸ್‌ಪರ್ಟ್ಸ್‌ನಿಂದ ಸ್ಟಡಿ ಮಾಡಿಸಿ. ಮೂರನೇ ಹಂತದ ಯೋಜನೆ ಜಾರಿಗೆ ತಂದರೂ ಸಹ ಮಲಪ್ರಭಾದಲ್ಲಿ ನೀರು ಸಾಲುವುದಿಲ್ಲ. ಮಹದಾಯಿ ಮತ್ತು ಮಲಪ್ರಭಾ ನದಿ ಜೋಡಣೆ ಏನಾದರೂ ಆದರೆ ಮಲಪ್ರಭಾಗೆ ನೀರು ಬರುತ್ತದೆ. ಇಲ್ಲದಿದ್ದರೆ, ನೀವು ಮೂರನೇ ಹಂತದ ಯೋಜನೆ ತೆಗೆದುಕೊಂಡರೂ ಅದು ಪ್ರಾಕ್ಟಿಕಲ್ ಆಗುವುದಿಲ್ಲ. ಕಾಳಿನದಿ ನೀರನ್ನು ತಂದರೆ ಹುಬ್ಬಳ್ಳಿ-ಧಾರವಾಡ ನಗರದ ನೀರಿನ ಬವಣೆ ತಪ್ಪುತ್ತದೆ. ಇವತ್ತೂ ನೀರಿನ ಬವಣೆ ತಪ್ಪಿಲ್ಲ. ಬೋರ್‌ವೆಲ್ ಹಾಕಿದ್ದರಿಂದ ಜನರು ಸಮಾಧಾನವಾಗಿದ್ದಾರೆ. ಮೇ-ಜೂನ್-ಜುಲೈ ತಿಂಗಳಲ್ಲಿ ಬಹಳಷ್ಟು ತೊಂದರೆಯಾಗುತ್ತಿದೆ. ಇದರ ಬಗ್ಗೆ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: 144 ಕೋಟಿ ರೂಪಾಯಿ ಯೋಜನೆಗೆ ನಾವೂ ಸಹ ಪ್ರಯತ್ನಿಸುತ್ತಿದ್ದೇವೆ. ವರ್ಲ್ಡ್ ಬ್ಯಾಂಕ್‌ನವರೂ ಕೂಡ ಬಹಳ ಬೇಗ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅದರ ಜೊತೆಗೆ, ಕಾಳಿನದಿಯಿಂದ ಯೋಜನೆಯಾದರೆ ಕುಡಿಯುವ ನೀರಿಗೆ ಶಾಶ್ವತ ಯೋಜನೆಯಾದಂತಾಗುತ್ತದೆಂದು ಹೇಳಿದ್ದೀರಿ. ಅದನ್ನು ಕೂಡ ನಮ್ಮ

ಇಲಾಖೆಯವರು, ಬೋರ್ಡಿನವರು ಕೂಡ ವಯೇಬಿಲಿಟಿ ನೋಡಿದ್ದಾರೆ. ಹುಬ್ಬಳ್ಳಿ-ಧಾರವಾಡದಿಂದ ಅದು ಸುಮಾರು 52 ಕಿ.ಮೀ. ದೂರವಾಗುತ್ತದೆ. ತಾಂತ್ರಿಕ ದೃಷ್ಟಿಯಿಂದ, ಆರ್ಥಿಕತೆದ ದೃಷ್ಟಿಯಿಂದ, ಹಣಕಾಸಿನ ದೃಷ್ಟಿಯಿಂದ ವಯೇಬಲ್ ಅಲ್ಲವೆಂದು ಹೇಳುತ್ತಿದ್ದಾರೆ. ಮೂರು ಹಂತದ ಪಂಪಿಂಗ್ ಇದ್ದು, ನಾಳೆ ನಾವದನ್ನು ಕಾಸ್ಟ್ ವಿಷಯ ತೆಗೆದುಕೊಂಡಾಗ ವಾಟರ್ ರೇಟ್ ಹೆಚ್ಚಾಗುವ ಸಂದರ್ಭವಿರುತ್ತದೆ. ಆ ದೃಷ್ಟಿಯಿಂದ ಇನ್ನೂ ಎಗ್ಜಾಮಿನ್ ಮಾಡಬೇಕಾಗಿದೆ. ಬಹಳ ಸುದೀರ್ಘವಾಗಿ ನಾವು ಚರ್ಚಿಸಬೇಕಾಗಿದೆ. ನಾವು ಮಾಡುವ ಯೋಜನೆಗಳು ನಾಳೆ ಜನರಿಗೆ ಭಾರವಾಗಬಾರದು. ಆ ಸ್ಥಿತಿಯಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸಬೇಕಾಗುತ್ತದೆ. ಮಲಪ್ರಭಾ ಜಲಾಶಯಕ್ಕೆ ನೀರಾವರಿ ಮಂತ್ರಿಗಳಾದ ಶ್ರೀ ಹೆಚ್.ಕೆ.ಪಾಟೀಲ್‌ರವರು, ಮಹದಾಯಿ ನದಿ ಯೋಜನೆ ಜೋಡಣೆ ಬಗ್ಗೆ ಈಗಾಗಲೇ ಪ್ರಸ್ತಾಪಿಸಿದ್ದು, ಆ ಯೋಜನೆ ಮೂಲಕ ಇವೆಲ್ಲಾ ಯೋಜನೆಗಳಿಗೆ ಏನೂ ತೊಂದರೆಯಾಗದ ರೀತಿಯಲ್ಲಿ ನೋಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಹೆಚ್.ಕೆ.ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು): ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಸ್ತಾಪಿಸಿದಂತೆ, ಹುಬ್ಬಳ್ಳಿ-ಧಾರವಾಡಕ್ಕೆ ಕುಡಿಯುವ ನೀರಿನ ತೊರತೆಯಾಗುವ ಭಯ ನಮ್ಮೆಲ್ಲರಿಗೂ ಬರುತ್ತಿದೆ. ಮಾನ್ಯ ಚಿಮ್ಮನಕಟ್ಟಿಯವರು ಈಗಾಗಲೇ ಅದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕಾಳಿ ನದಿಯಿಂದ ನೀರನ್ನು ಲಿಫ್ಟ್ ಮಾಡುವುದು, ಮೂರನೇ ಸ್ಟೇಜ್ ಅದರೆ ಎಕನಾಮಿಕಲಿ ವಯೇಬಲ್ ಆಗುವುದಿಲ್ಲವೆಂಬುದು ಪರಿಶೀಲನೆಯಲ್ಲಿದೆ. ನಾವು ಕಾಳಿ ನದಿಯಿಂದ ವೆಸ್ಟ್ ಫ್ಲೋಯಿಂಗ್ ರಿವರ್ಸ್‌ನಿಂದ ಮಲಪ್ರಭಾಗೆ ಡೈವರ್ಟ್ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂಬ ಬಗ್ಗೆ ಅಧ್ಯಯನ ಮಾಡಲು ಕ್ಯಾಪ್ಟನ್ ರಾಜಾರಾವ್‌ರವರ ನೇತೃತ್ವದ ಸಮಿತಿ ನೇಮಿಸಿದ್ದು, ಅವರು ಇಂಟರೀಮ್ ನೋಟ್ಸ್ ಏನು ಕೊಟ್ಟಿದ್ದಾರೆ ಅದರ ಪ್ರಕಾರ, ಕಾಳಿ ನದಿಯ ಸುಮಾರು 8-9 ಟಿಎಂಸಿ ನೀರನ್ನು ಮಲಪ್ರಭಾ ನದಿಗೆ ಡೈವರ್ಷನ್ ಮಾಡಬಹುದೇ ಎನ್ನುವ ಬಗ್ಗೆ ಅದರ ಸಾಧ್ಯತೆ ಬಗ್ಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಳಿ ನದಿ ನೀರನ್ನು ಮಲಪ್ರಭಾ ನದಿಗೆ ಡೈವರ್ಟ್ ಮಾಡಿದರೆ, ಆಗ ಕುಡಿಯುವ ನೀರನ್ನು ನಾವು ಆಗ್‌ಮೆಂಟ್ ಮಾಡಬಹುದು. ಅದರ ಜೊತೆಯಲ್ಲೇ, ದಾಂಡೇಲಿಯಿಂದ ನೀರು ತೆಗೆದುಕೊಳ್ಳುವ ಬಗ್ಗೆ, ಒಂದು ಹಂತದಲ್ಲಿ ಅದು ಅಷ್ಟು ಎಕನಾಮಿಕಲಿ ವಯೆಬಲ್ ಆಗಿರಲಿಲ್ಲ. ಈಗ ಬದಲಾದ ಪರಿಸ್ಥಿತಿಯನ್ನು ಗಮನಿಸಿ, ಸರ್ಕಾರ ಅದನ್ನು ಮತ್ತೆ ಪರಿಶೀಲನೆ ಮಾಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಕಾವೇರಿ ನದಿ ನೀರನ್ನು 100 ಕಿ.ಮೀ ದೂರವಿರುವ ಬೆಂಗಳೂರಿಗೆ ತರುವುದಕ್ಕೆ ಸಾಧ್ಯವಿದೆ. ಅಂದಮೇಲೆ, 52 ಕಿ.ಮೀ. ದೂರದಿಂದ ನೀರನ್ನು ತರಲೂ ಸಾಧ್ಯವಿದೆ. ವಯೆಬಿಲಿಟಿ ಬಗ್ಗೆ ರೀ-ಕನ್‌ಸಿಡರೇಷನ್ ಮಾಡಿ.

ಶ್ರೀ ಹೆಚ್.ಕೆ.ಪಾಟೀಲ್: ಅದನ್ನು ಟ್ರೈ ಮಾಡುತ್ತೇನೆ. ವಯೇಬಲ್ ಇದೆಯೇ ಎನ್ನುವ ಬಗ್ಗೆ ರೀ-ಕನ್ಸಿಡರ್ ಮಾಡುತ್ತೇವೆ. 80 ಕಿ.ಮೀ. ದೂರವಿದ್ದರೂ ಹುಬ್ಬಳ್ಳಿ-ಧಾರವಾಡಕ್ಕೆ ನೀರು ಕೊರತೆಯಾಗದಂತೆ ಸರ್ಕಾರ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತದೆ.

ಬೆಂಗಳೂರಿನ ರಾಗಿಗುಡ್ಡದ ಹಿಂಭಾಗದ ರಸ್ತೆಯಲ್ಲಿ ನೈರ್ಮಲ್ಯ ಹಾಳಾಗುತ್ತಿರುವುದು.

270(3385)

ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ 9ನೇ ಬ್ಲಾಕಿನಲ್ಲಿರುವ ರಾಗಿಗುಡ್ಡ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಹಿಂಭಾಗದ ಗೇಟ್ ಬಳಿಯಿರುವ 6ನೇ ಎ ಮುಖ್ಯ ರಸ್ತೆಯಲ್ಲಿ ಸುತ್ತ ಮುತ್ತಲಿನ ಗುಡಿಸಲು ನಿವಾಸಿಗಳು ಮಲಮೂತ್ರ ವಿಸರ್ಜನೆ ಮಾಡಿ ನೈರ್ಮಲ್ಯವನ್ನು ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಭಾಗದಲ್ಲಿ ನೈರ್ಮಲ್ಯವನ್ನು ಕಾಪಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಪದರಿ ರಸ್ತೆಗೆ ಡಾಂಬರೀಕರಣ, ಸೋಡಿಯಂ ವೇಪರ್ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಮಾಡಿ ದೇವಸ್ಥಾನಕ್ಕೆ ಬರತಕ್ಕ ವಾಹನಗಳ ನಿಲುಗಡೆಗೆ ಅವಕಾಶ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಹೌದು

ಆ) ಈಗಾಗಲೇ ಒನೇ 'ಎ' ಮುಖ್ಯರಸ್ತೆಯಲ್ಲಿ ಇದ್ದ ಮಣ್ಣು, ಕಲ್ಲುಗಳನ್ನು ಹೊರ ಸಾಗಿಸಲಾಗಿರುತ್ತದೆ ಹಾಗೂ ಈ ಪ್ರದೇಶದ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಲು ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಇ) ಹೌದು. ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ: ಜಯನಗರ 9ನೇ ಬ್ಲಾಕ್‌ನಲ್ಲಿರುವ ರಾಗಿಗುಡ್ಡದಲ್ಲಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನವಿದ್ದು, ಅಲ್ಲಿಗೆ ಪ್ರತಿದಿನ ಸಾವಿರಾರು ಭಕ್ತಾದಿಗಳು ಬರುತ್ತಿದ್ದಾರೆ. ಅಲ್ಲಿ ಸೋಡಿಯಂ ವೇಪರ್ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಬೇಕು